ಅಸಲು ದಾವಾ ಸಂಖ್ಯೆ .19/2016

ಪಿ.ಡಬ್ಲ್ಯೂ-1

ದಿಃ 09-08-2019

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಪ್ರತಿ ವಾದಿ ಪರ ವಕೀಲರಿಂದ ಃ-

ದಿಃ 09-10-1967 ರಂದು ನಾನು ಮತ್ತು ನನ್ನ ಸಹೋದರರು ಒಟ್ಟು ಕುಟುಂಬದ ಆಸ್ತಿಗಳು ಮತ್ತು ಪಿತ್ರಾರ್ಜಿತ ಆಸ್ತಿಗಳಲ್ಲಿ ಹಿಸ್ಸೆ ಮಾಡಿಕೊಂಡಿದ್ದೇವೆ ಎಂದರೆ ಸಾಕ್ಷಿ ನಾನು ಆಗ ಅಪ್ರಾಪ್ತನಾಗಿದ್ದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ . ಆ ಕಾಲಕ್ಕೆ ನನ್ನ ತಂದೆ ತೀರಿಕೊಂಡಿದ್ದರು . ಆ ಕಾಲಕ್ಕೆ ನನಗೆ 22 ವರ್ಷ ಆಗಿತ್ತು ಎಂದರೆ ಸಾಕ್ಷಿ ನನಗೆ 12 ವರ್ಷ ಅಗಿತ್ತು ಎಂದು ನುಡಿಯುತ್ತಾರೆ . ನಾನು 5 ತರಗತಿಯವರೆಗೂ ಚೀಲೂರು ಗ್ರಾಮದಲ್ಲಿ ವ್ಯಾಸಂಗ ಮಾಡಿರುತ್ತೇನೆ . ನಾನು 8 ನೇ ತರಗತಿಯವರೆಗೂ ಪೊ ೀತಿ ವೀರಪ್ಪ ಪ್ರೌಢಶಾಲೆ ಓದಿದ್ದೇನೆ ಎಂದರೆ ಸಾಕ್ಷಿ ನಾನು 6 ನೇ ತರಗತಿ ಓದಿದ್ದೇನೆ ಎಂದು ನುಡಿಯುತ್ತಾರೆ . ನನ್ನ ಜನ್ಮ ದಿನಾಂಕ 06-02-1946 ರಲ್ಲಿ ಹುಟ್ಟಿದ್ದೇನೆ ಎಂದರೆ ಸರಿ.ನಾನು ನನ್ನ ಅಣ್ಣ ವಿರುದ್ಧ ಓ.ಎಸ್ 194/2008 ರಲ್ಲಿ ನನ್ನ ವಯಸ್ಸು 62 ವರ್ಷ ಎಂದು ತೋರಿಸಿದ್ದೇನೆ ಎಂದರೆ ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ . ನಾನು ಮತ್ತು ನನ್ನ ಸಹೋದರರು 1967 ರಲ್ಲಿ ಹಿಸ್ಸೆಯಾಗಿದ್ದು ಹಂಚಿಕೊಳ್ಳಲು ಯಾವುದೇ ಜಮೀನು ಉಳಿದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ದಿಃ 03-01-2016 ರಂದು ಹಿಸ್ಸೆಬೇಕೆಂದು ಕೇಳಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 22.5 X 120 ಅಡಿ ಜಾಗದಲ್ಲಿ ನಾನು ಮನೆಯನ್ನು ಕಟ್ಟಿಕೊಂಡು ವಾಸಮಾಡುತ್ತಿದ್ದೇನೆ ಎಂದರೆ ಸರಿ . ನಮ್ಮ ಮತ್ತು ನನ್ನ ಅಣ್ಣ ಹಾಲಪ್ಪನ ಮನೆಯ ಮಧ್ಯೆ ಪಶ್ಚಿಮಕ್ಕೆ ಹಾಲಪ್ಪನವರ ಗೋಡೆಗೆ ತಾಗಿಕೊಂಡು ನಾನು ಗೋಡೆ ಕಟ್ಟಿದ್ದೇನೆ ಎಂದರೆ ಸರಿಯಲ್ಲ .ಸುಳ್ಳು ದಾವೆಯನ್ನು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಪ್ರತಿವಾದಿ 2 ,4, 5 ಪರ ವಕೀಲರಿಂದ ಃ

ಕಾಲಾವಕಾಶ ಕೋರಿದ್ದು, ನೀಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.